JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಹರಿಹರನ ರಗಳೆ ಗಳಲ್ಲಿ ಭಕ್ತಿಯ ಸ್ವರೂಪ

**ಡಾ. ಶೋಭಾ. ಎನ್**

ಕನ್ನಡ ಸಹ ಪ್ರಾಧ್ಯಾಪಕರು

ಸ. ಪ್ರ. ದ ಕಾಲೇಜು, ಯಲಹಂಕ, ಬೆಂಗಳೂರು.

ಕನ್ನಡ ಸಾಹಿತ್ಯದ ಮೇರುಶಿಖರಗಳಲ್ಲಿ ಹರಿಹರನು ಒಬ್ಬ, ಚಂಪೂ, ವಚನ ಸಾಹಿತ್ಯದ ನಂತರ ಜಡವಾಗಿ ಸಾಗುತ್ತಿದ್ದ ಕನ್ನಡ ಸಾಹಿತ್ಯಕ್ಕೆ ಹೊಸ ರಕ್ತದಾನ ಮಾಡಿ ಹೊಸ ಚೈತನ್ಯವನ್ನು ನೀಡಿದವನು ಹರಿಹರ. ವಚನ ಚಳುವಳಿಯ ತತ್ವ ಆದರ್ಶಗಳ ಹಿನ್ನೆಲೆಯಲ್ಲಿ ಬಂದ ಹರಿಹರ ಕಾವ್ಯದ ವಸ್ತು, ಭಾಷೆ, ಛಂದಸ್ಸು, ಕಥಾನಾಯಕರ ಆಯ್ಕೆ, ಧೋರಣೆಗಳಲ್ಲಿ ಮಹತ್ವದ ಬದಲಾವಣೆಗೆ ಕಾರಣನಾದ. ಹೀಗಾಗಿ ಅವನನ್ನು ಪ್ರಯೋಗ ಪ್ರಿಯ, ಕ್ರಾಂತಿಕವಿ, ಭಕ್ತಿಕವಿ ಎಂದು ಅಭಿಮಾನದಿಂದ ಗೌರವಿಸುತ್ತೇವೆ.

ಹರಿಹರ ವೈಯಕ್ತಿಕ ವಿಚಾರಗಳನ್ನು ತನ್ನ ಕೃತಿಗಳಲ್ಲಿ ಅಷ್ಟಾಗಿ ಹೇಳಿಕೊಂಡಿಲ್ಲ. ಅನ್ಯ ಕೃತಿಗಳಿಂದ ಇವನ ವಿಚಾರ ತಿಳಿದು ಬರುತ್ತದೆ. ಆ ಮೂಲಗಳೆಂದರೆ ಸಿದ್ದನಂಜೇಶನ "ರಾಘವಾಂಕ ಚಾರಿತ್ರ" ಪದ್ಮಣಾಂಕನ 'ಪದ್ಮರಾಜಪುರಾಣ' ರಾಘವಾಂಕನ 'ಸೋಮನಾಥ ಚಾರಿತ್ರ" ಶಾಂತಲಿಂಗದೇಶಿಕನ 'ಭೈರವೇಶ್ವರ ಕಾವ್ಯ ಕಥಾಮಣಿ ಸೂತ್ರ ರತ್ನಾಕರ' ವಿರೂಪಾಕ್ಷ ಪಂಡಿತನ 'ಚೆನ್ನಬಸವ ಪುರಾಣ' ಈ ಆಧಾರಗಳ ಪ್ರಕಾರ ಹರಿಹರನ ಜನ್ಮಸ್ಥಳ ಹಂಪೆ, ತಂದೆ ಮಹಾದೇವ, ತಾಯಿ ಶರ್ವಾಣಿ ಎಂದೂ, ಈತ ಹೊಯ್ಸಳ ದೊರೆ ನರಸಿಂಹ ಬಲ್ಲಾಳನ ಕಾಲದಲ್ಲಿ ಅರಮನೆಯ ಕರಣಿಕನಾಗಿದ್ದ ಎಂಬ ಅಂಶವು ತಿಳಿದು ಬರುತ್ತದೆ. ಕೆಲವು ಕೃತಿಗಳು ಹರಿಹರನ ಪವಾಡಗಳನ್ನು ಚಿತ್ರಿಸುತ್ತವೆ. ಅವುಗಳಲ್ಲಿ ಹರಿಹರನು ದ್ವಾರ ಸಮುದ್ರದಲ್ಲಿ ಕರಣಿಕನಾಗಿದ್ದಾಗ ತಟ್ಟನೆ ಎಚ್ಚೆತ್ತವನಂತೆ 'ವಿರೂಪಾಕ್ಷ' ಎನ್ನುತ್ತ ತನ್ನ ಎರಡೂ ಕೈಗಳನ್ನು ಹೊಸಕಿ ಹಂಪೆಯಲ್ಲಿ ವಿರೂಪಾಕ್ಷ ದೇವಾಲಯದ ತೆರೆಗೆ ಹತ್ತಿದ್ದ ಬೆಂಕಿಯನ್ನು ಆರಿಸಿದುದು ಮತ್ತು ಹರಿಹರನ ಹರಿಹರೇಶ್ವರ ದೇವಾಲಯದಲ್ಲಿದ್ದ ಬ್ರಹ್ಮರಾಕ್ಷಸನನ್ನು ಓಡಿಸಿ ಅಲ್ಲಿ ಎಂದಿನಂತೆ ದೇವರಿಗೆ ಪ್ರಜೆ ನಡೆಯುವಂತೆ ಮಾಡಿದುದು, ತನ್ನ ಗುರು ಪರಂಪರೆಯನ್ನು ಕವಿ ವಿವರವಾಗಿ ಹೇಳಿಕೊಂಡಿದ್ದಾನೆ. ಅದರ ಪ್ರಕಾರ ಹಂಪೆಯ ಶಂಕರದೇವನ ಶಿಷ್ಯ ಮಾದಿರಾಜ, ಅವನ ಶಿಷ್ಯ ಮಾಯಿದೇವ, ಶಿಷ್ಯನೇ ಈ ಹಂಪೆಯ ಹರಿಹರ.

ಹರಿಹರನ ಕಾಲದ ಬಗ್ಗೆ ಖಚಿತತೆಯಿಲ್ಲ, ಅವನ ಕಾಲವನ್ನು ನಿರ್ಣಯಿಸಲು ಹೊಯ್ಸಳ ದೊರೆ ನರಸಿಂಹ ಬಲ್ಲಾಳನ ಕಾಲ ಹಾಗೂ ಏಕಾಂತರಾಮಯ್ಯನ ವಿಚಾರವನ್ನು (ಈತನನ್ನು ಕುರಿತು ಹರಿಹರ ರಗಳೆಯನ್ನು ರಚಿಸಿದ್ದಾನೆ) ತಿಳಿಸುವ ಅಬ್ಬಲೂರು ಶಾಸನಗಳು ಆಧಾರವಾಗಿವೆ. ಈ ಶಾಸನದ ಪ್ರಕಾರ ಏಕಾಂತ ರಾಮಯ್ಯನ ಕಾಲ ೧೨೦೩ ಹೀಗಾಗಿ ಇವನ ಕಾಲವನ್ನು ೧೨ನೇ ಶತಮಾನದ ಕೊನೆಯ ಭಾಗದಿಂದ ೧೩ನೇ ಶತಮಾನದ ಮಧ್ಯಭಾಗದವರೆಗೂ ಜೀವಿಸಿದ್ದನೆಂದು ಹೇಳಬಹುದು.

**<u>ಕೃತಿಗಳು</u>**

**ಹರಿಹರನ ಕೃತಿಗಳೆಂದರೆ :** ಪಂಪಾಶತಕ ,ರಕ್ಷಾ ಶತಕ, ಮುಡಿಗೆಯ ಅಷ್ಟಕ,ಗಿರಿಜಾ ಕಲ್ಯಾಣ, ಶಿವಶರಣರ ರಗಳೆಗಳು

**<u>ರಗಳೆ:</u>**

ಚಂಪೂ ಯುಗದಲ್ಲಿ ಕೇವಲ ವರ್ಣನೆಗೆ ಸೀಮಿತವಾಗಿದ್ದ 'ರಗಳೆ' ಛಂದೋ ಪ್ರಕಾರವನ್ನು ಆಯ್ಕೆ ಮಾಡಿಕೊಂಡು ಅದರಲ್ಲಿಯೂ ಕಾವ್ಯ ರಚಿಸಲು ಸಾಧ್ಯ ಎಂಬುದನ್ನು ತೋರಿಸಿದ. ಈ ಎಲ್ಲಾ ಸಾಹಿತ್ಯ ಕೃತಿಗಳಿಗಿಂತ ರಗಳೆಗಳಿಂದಾಗಿಯೇ ಹರಿಹರ ನಮ್ಮ ಮನಸ್ಸಿನಲ್ಲಿ ಶಾಶ್ವತ ಸ್ಥಾನವನ್ನು ಗಳಿಸಿಕೊಂಡಿದ್ದಾನೆ.

ಹರಿಹರನ ರಗಳೆಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು.

೧. ಪುರಾತನ ರಗಳೆಗಳು

೨. ನೂತನರ ರಗಳೆಗಳು ಹಾಗೂ ಇತರೆ ರಗಳೆಗಳು.

ಪುರಾತನ ರಗಳೆಗಳಿಗೆ ವಸ್ತು ತಮಿಳುನಾಡಿನ ಪುರಾತನ ಶಿವಭಕ್ತರಾದ ತಿರುನೀಲಕಂಠ, ಇಳೆಯೊಂಡ ಗುಡಿಮಾರ, ಕಣ್ಣಪ್ಪದೇವರು, ನಂಬಿಯಣ್ಣ, ಸೇದಿರಾಜ, ತಿರುನಾಳ್ ಪೋವರು, ಮೊದಲಾದವರು ಈ ರಗಳೆಗಳಿಗೆ ಮೂಲ ತಮಿಳಿನ ಶೆಕ್ಕಿಯಾರ್‌ನ 'ಪೆರಿಯ ಪುರಾಣ' ಹಾಗೂ ಸಂಸ್ಕೃತದ ಕೆಲವು ಕೃತಿಗಳು ನೂತನರ ರಗಳೆಗಳೆಂದರೆ ಕನ್ನಡದ ಶಿವಶರಣರು ಅಂದರೆ ಬಸವಣ್ಣ, ಮಹಾದೇವಿ ಅಕ್ಕ, ಪ್ರಭುದೇವ, ಕುಂಬಾರಗುಂಡಯ್ಯ, ಶಂಕರದಾಸಿಮಯ್ಯಾ ಮೊದಲಾದವರು. ಶಿವಶರಣರ ಕಥನಕ್ಕೆ ಅವರ ವಚನಗಳೇ ಪ್ರಧಾನ ಆಧಾರವಾಗಿವೆ. ಹರಿಹರನ ರಗಳೆಗಳು ಎಷ್ಟು? ಎಂಬ ಬಗ್ಗೆ ಸಾಕಷ್ಟು ಚರ್ಚೆ ನಡೆದು ಪ್ರಸ್ತುತ ಹಿರೇಮಲ್ಲೂರ್ ಈಶ್ವರನ್‌ರ ಪ್ರಕಾರ ಸುಮಾರು ೧೦೬ ರಗಳೆಗಳು ಎಂಬ ತೀರ್ಮಾನಕ್ಕೆ ಬರಲಾಗಿದೆ.

**ಹರಿಹರನ ರಗಳೆಗಳ ವೈಶಿಷ್ಟ್ಯ:**

೧. ರಾಮಾಯಣ, ಮಹಾಭಾರತ ಮೊದಲಾದ ಅ ಪುರಾಣದ ವಸ್ತುವನ್ನು ಬಿಟ್ಟು ಶ್ರೀಸಾಮಾನ್ಯನ ಜೀವನ ಸಾಹಿತ್ಯದಲ್ಲಿ ಮೊಟ್ಟಮೊದಲ ಬಾರಿಗೆ ಅಭಿವ್ಯಕ್ತಿಯನ್ನು ಪಡೆಯಿತು.

೨. ಇಲ್ಲಿನ ನಾಯಕರು ಸಾಮಾನ್ಯ ವರ್ಗ, ವರ್ಣದಿಂದ ಬಂದವರು.

೩. 'ಭೂಲೋಕಕ್ಕೆ' ನೀಡಿದ ಮಹತ್ವ, ರಗಳೆಗಳ ನಾಯಕರು ಕೈಲಾಸದಲ್ಲಿ ಮಾಡಿದ ಯಾವುದು ತಪ್ಪಿನಿಂದಾಗಿ ಮರ್ತ್ಯ (ಭೂಮಿ)ಯಲ್ಲಿ ಹುಟ್ಟಿ ಪಾಪದ ಪ್ರಾಯಶ್ಚಿತ್ತದ ನಂತರ ಕೈಲಾಸಕ್ಕೆ ಹಿಂದಿರುಗುತ್ತಾರೆ. ಈ ತಂತ್ರದ ಮೂಲಕ ಹರಿಹರ 'ಭೂಮಿ' ಅಥವಾ 'ಇಹ' ಲೋಕದ ಮಹತ್ವವನ್ನು ಎತ್ತಿಹಿಡಿದು ಇದು ವ್ಯರ್ಥವಲ್ಲ 'ಸಾಧನಾರಂಗ' ಎಂಬುದಾಗಿ ಚಿತ್ರಿಸಿದ್ದಾನೆ.

೪. ಭಕ್ತ–ಭಗವಂತನ ನಡುವಿನ ಅಂತರ, ಇಲ್ಲಿ ಭಗವಂತನೇ ಭಕ್ತರ ಬಳಿ ಬರುತ್ತಾನೆ.

೫. 'ಭಕ್ತಿ' ಪ್ರಧಾನವಾದರೂ 'ಸಾಮಾಜಿಕ ಕಾಳಜಿ'ಯೂ ಕಂಡು ಬರುತದೆ.

೬. ವಚನಕಾರರ ಐತಿಹಾಸಿಕ ಅಂಶಗಳ ಬಗ್ಗೆ ಅಧಿಕೃತ ದಾಖಲೆಗಳಾಗಿವೆ.

೭. ರಗಳೆಯಲ್ಲಿ ಗದ್ಯ–ಪದ್ಯಗಳೆರಡೂ ಇದ್ದರೂ ಇಲ್ಲಿನ ಗದ್ಯ, ಪದ್ಯದ ಬೆಳವಣಿಗೆಯಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತದೆ.

೮. ವಚನಕಾರರ ಧೋರಣೆಗಳಾದ 'ಕಾಯಕವೇ ಕೈಲಾಸ' 'ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟವಯ್ಯ' ಎಂಬ ವಿಚಾರವನ್ನು ರಗಳೆಗಳು ಎತ್ತಿ ಹಿಡಿದಿವೆ.

ಹೀಗೆ ಹರಿಹರ ತನ್ನ ರಗಳೆಗಳಲ್ಲಿ ಸ್ವಾತಂತ್ರ ಧೋರಣೆಗಳನ್ನು, ಕ್ರಾಂತಿಕಾರವಾದ ಕ್ರಿಯೆಗಳಿಂದ, ಭಕ್ತನ ಬದುಕನ್ನು ತನ್ಮಯವಾಗಿ ವರ್ಣಿಸುವುದರಿಂದಲೂ ಹರಿಹರ ಹಾಗೂ ಅವನ ರಗಳೆಗಳು ಕನ್ನಡ ಸಾಹಿತ್ಯವನ್ನು ಬೆಳಗಿಸುವ ಜ್ಯೋತಿಗಳು.

ಹರಿಹರನ ರಗಳೆಗಳಲ್ಲಿ ಪ್ರಮುಖವಾದವುಗಳೆಂದರೆ:

೧. ಬಸವರಾಜದೇವರ ರಗಳೆ

೨. ನಂಬಿಯಣ್ಣನ ರಗಳೆ

೩. ಬೇಡರ ಕಣ್ಣಪ್ಪನ ರಗಳೆ

೪. ಕುಂಬಾರ ಗುಂಡಯ್ಯನ ರಗಳೆ

೫. ಪುಷ್ಪರಗಳೆ ಮೊದಲಾದವು.

**ರಗಳೆಗಳಲ್ಲಿ ಕಂಡುಬರುವ ಭಕ್ತ–ಭಗವಂತನ ಸಂಬಂಧ:**

**ಬಸವರಾಜದೇವರ** ರಗಳೆ ಹರಿಹರನ ಪ್ರಮುಖವಾದ ರಗಳೆಯಾಗಿದೆ. ಬಸವಣ್ಣನ ವ್ಯಕ್ತಿತ್ವದ ಒಂದು ಮುಖವಾದ ಭಕ್ತಿಜೀವನವನ್ನು ಪ್ರಧಾನವಾಗಿ ಚಿತ್ರಿಸಿದ್ದಾನೆ. ಬಸವಣ್ಣನ ಬಕ್ತಿ ಜೀವನದ ಚಿತ್ರಣದಲ್ಲಿ ಭಕ್ತ ಹರಿಹರನ ಪ್ರಭಾವವನ್ನು ಗುರ್ತಿಸಬಹುದು. ಇಲ್ಲಿ ಭಕ್ತನೊಬ್ಬನು ಮೊದಲ ಜಾವದಲ್ಲೆದ್ದು ಭಸ್ಮವನ್ನು ಮೈಗೆಲ್ಲಾ ಪೂಸಿಕೊಂಡು, ಪರಿಮಳ ಸೋರಿ ಹೋಗದಂತೆ ಚೆನ್ನಾಗಿ ಬಿಗಿದು

ನೇಯ್ದಿರುವ ದೊಡ್ಡ ಹೂವಿನ ಬುಟ್ಟಿಯನ್ನು ತೆಗೆದುಕೊಂಡು ಶಿವಗೀತೆಗಳನ್ನು ಹಾಡುತ್ತಾ ಹೂವಿನ ತೋಟಕ್ಕೆ ಬರುತ್ತಾನೆ.

'ಅಳಿಯೆರಗದನಿಲನಲುಗ'ದ ರವಿಕರಂ ಪುಗದ
ಸುಳಿಗೊಂಡು ದಳವೇರು ಹಸುರಳಿದು ಬೆಳುಪುಳಿದ
ಸುರುಚಿರಮೆನಿಪ್ಪ ಮೀಸಲು ಮೊಗ್ಗೆಯಂ ಕೊಂಡು
ಬದುಕಿದೆಂ ಬದುಕಿದೆನೆನುತ್ತೆ ನದಿಗೆಯ್ತೆಂದು
ಬರವನೆಳಸಿರ್ದಯ್ಯೆ ದೇವ ತಮವಿದನೆಂದು
ಎರವಣಿಸಿ ಬರುತಿರ್ದೆ ತಂದೆ ಮುಳಿಯದಿರೆಂದ
ಎನ್ನಯ್ಯ ಎನ್ನರಸ ಎನ್ನ ಬಂದುವೆಯೆನುತೆ'.

ಹೀಗೆ ಇಲ್ಲಿನ ಭಕ್ತನ ದಿನಚರಿ ಆರಂಭವಾಗುವುದು ತನ್ನ ಭಗವಂತನ ಆರಾಧನೆಗೆ ಬೇಕಾದ ಸಾಮಗ್ರಿಗಳನ್ನು ಸಂಗ್ರಹಿಸುವ ಮೂಲಕ ಬಸವಣ್ಣ ಕೂಡಲಸಂಗಮನ ಸಂಬಂಧ ದಿನದಿನಕ್ಕೆ ಘಳಿಗೆ ಘಳಿಗೆಗೆ ಭಕ್ತಿ ಹೆಚ್ಚುತ್ತಾ ಹೋಗುತ್ತದೆ. ಇವರಿಬ್ಬರ ನಡುವೆ ಭಕ್ತ-ಭಗವಂತ ಎಂಬ ಅಂತರ ಕಡಿಮೆಯಾಗಿ 'ಸಂಗಂ ಬಸವನೋ ಬಸವಂ
ಸಂಗನೊ ತಮ್ಮಿರ್ಬರೊರ್ಬರೆಂತೊರ್ಬರೋ ಮೇಣ್
ಸಂಗಂ ಬಸವನೊ ಬಸವಂ
ಸಂಗನೊಯೆನಿಪೊಂದಾ ಭೇದ ಭಾವದೊಳಿದಣ್'.

ಅಭೇದ ಭಾವದಿಂದ ಶಿವ-ಭಕ್ತರ ಸಂಬಂಧ ದೈವಿಕರಣದ ಪ್ರಭಾವವನ್ನು ಕಳೆದುಕೊಂಡು ತಾಯಿ-ಮಗುವಿನ ವಾತ್ಸಲ್ಯವೆಂಬಂತೆ ಮಾನವೀಕರಣಗೊಂಡಿದೆ. ಇಲ್ಲಿಯ ಸಂಗಮನು ಬಸವನನ್ನು ಒಂದು ಕ್ಷಣವೂ ಅಗಲಲಾರ ಅಗಲಿಕೆಯ ಭಯದಿಂದ ನರಳುವ ಬಸವನನ್ನು ತಾಯಿ ಮಗುವನ್ನು ಸಂತೈಸುವಂತೆ ಕೂಡಲ ಸಂಗಮ ಅಂದರೆ 'ದೈವ' ದ ಪಾತ್ರ ಚಿತ್ರಿತವಾಗಿದೆ.

ಬಸವಣ್ಣನ ಭಕ್ತಿ ಜೀವನದ ಜೊತೆಗೆ ಅವನ ಜೀವನವನ್ನು ತಿಳಿಯಲು ಈ ರಗಳೆ ನಮಗೆ ಐತಿಹಾಸಿಕ ದಾಖಲೆಯಾಗಿದೆ. ಈ ಕಾವ್ಯ ಸಂಪೂರ್ಣವಾಗಿ ಲಭ್ಯವಾಗಿದ್ದರೆ ವಚನ ಸಾಹಿತ್ಯದ ಅಂತ್ಯ ಹೇಗಾಯಿತು ಎಂಬ ಅಂಶ ಸ್ಪಷ್ಟವಾಗುತ್ತಿತ್ತು.

ಬೇಡರ ಕಣ್ಣಪ್ಪನೆಂಬ ಸಾಮಾನ್ಯ ಭಕ್ತನ ರಗಳೆಯಲ್ಲಿ ಶುದ್ಧ ಭಕ್ತಿ ಹಾಗೂ ಡಾಂಭಿಕ ಭಕ್ತಿಗೂ ಇರುವ ವ್ಯತ್ಯಾಸವನ್ನು ಕಾಣುತ್ತೇವೆ. ಇಲ್ಲಿ ವೃತ್ತಿಯಿಂದ ಬೇಡನಾದ ಸಮಾಜದ ಕೆಳಸ್ತರದಿಂದ ಬಂದಿದ್ದ ಕಣ್ಣಪ್ಪ ಕಾವ್ಯದ ನಾಯಕ .ಇಲ್ಲಿಯ ಕಣ್ಣಪ್ಪನಿಗೆ ನಾಗರೀಕ ಪ್ರಪಂಚದ ಸಾಂಪ್ರದಾಯಿಕ ಆಚರಣೆಗಳ ಅರಿವಿಲ್ಲ, ಆದರೆ ಅವನ ಅಂತರಂಗದಲ್ಲಿ ಶಿವನ ಬಗ್ಗೆ ಶುದ್ಧವಾದ ಮುಗ್ಧ ಭಕ್ತಿಯನ್ನು ಕಾಣುತ್ತೇವೆ. ಈ ಮುಗ್ಧ ಭಕ್ತನ ಪಾಲಿಗೆ ಶಿವ ಬರಿಯ ಕಲ್ಲಿನ ಲಿಂಗವಲ್ಲ, ಹಸಿವು, ಹೆದರಿಕೆ, ನೋವು-ನಲಿವುಗಳನ್ನು ಹೊಂದಿರುವ ಸಾಮಾನ್ಯ ಜೀವ. ಈ ಮುಗ್ಧ ಭಕ್ತ ಶಿವನಿಗಾಗಿ ತಾನು ತಂದ ಬೇಟೆಯ ಮಾಂಸವನ್ನು ಸಿದ್ದಪಡಿಸುವುದು, ಶಿವನು ಉಂಡಾಗ ಸಂತೋಷಗೊಂಡು ಆವೇಶದಿಂದ ಕುಣಿದಾಡುವುದು ಇಲ್ಲೆಲ್ಲಾ ಕಣ್ಣಪ್ಪನ ಮುಗ್ದ ಭಕ್ತಿ ಚಿತ್ರಿತವಾಗಿದೆ.

ಮೊದಲ ಬಾರಿಗೆ 'ಲಿಂಗ'ವನ್ನು ಕಂಡ ಕಣ್ಣಪ್ಪ ಮುಗ್ದವಾಗಿ

'ಅಡವಿಯೊಳಗಿನಿತು ದಿನವವೊರ್ಬನಿರ್ದೈ ತಂದೆ
ಪಲವುಪಾಸದಿ ನೂಟವಂ ಕಂಡ ಎನ್ನವನೆ
ಹಲವು ಮಾತೇನು ಸಲಹುವೆನು ನಾ ನಿನ್ನವನೆ
ನಿದ್ದೆಗೆಯ್ ತಂದೆ ಇನ್ನಾವ ದುಗುಡಂ ಬೇಡ'

ಎಂದು ಶಿವನನ್ನೇ ಪ್ರೀತಿ-ವಾತ್ಸಲ್ಯ ಭಾವಗಳಿಂದ ಕಾಣುವ ಭಕ್ತ ಕಣ್ಣಪ್ಪ, ಮಡಿ=ಮೈಲಿಗೆ, ಆಚರಣೆಗಳ ಸಂಕೋಲೆಗಳಿಂದ ಮುಕ್ತವಾದ ಕಣ್ಣಪ್ಪನ ಪೂಜಾವಿಧಾನ ನಮ್ಮ ಮನಸ್ಸನ್ನು ಸೆಳೆಯುತ್ತದೆ.

ಕಣ್ಣಪ್ಪನ ಶುದ್ಧ ಭಕ್ತಿ ಸಂಪ್ರಾದಾಯಿಕ ಆಚರಣೆಗಳ ವಿರುದ್ಧ ಗೆಲ್ಲುವುದು ಪ್ರಜಾರಿ – ಕಣ್ಣಪ್ಪ ಶಿವನ ಕಣ್ಣಿನಿಂದ ರಕ್ತ ಬರುವ ಸಂದರ್ಭದಲ್ಲಿ ಅವರಿಬ್ಬರೂ ಪ್ರತಿಕ್ರಿಯಿಸುವ ಸಂದರ್ಭದಲ್ಲಿ ನೋಡಬಹುದು. ಪೂಜಾರಿ(ಬ್ರಾಹ್ಮಣ) ಲಿಂಗದ ಕಣ್ಣಿನಿಂದ ರಕ್ತ ಒಸರುವುದನ್ನು ಕಂಡು ಹೆದರಿ ಪ್ರಳಯಕ್ಕೆ ಮುನ್ಸೂಚನೆ ಎಂದು ತಿಳಿದು ಜನರಿಗೆಲ್ಲಾ ವಿಷಯ ಮುಟ್ಟಿಸಲು ಓಡಿಹೋಗುತ್ತಾನೆ. ಕಣ್ಣಪ್ಪನ ಈ ದೃಶ್ಯವನ್ನು ಕಂಡಾಗ 'ಎಲೆ ತಂದೆ, ಎನ್ನವನೆ ಏನಾದುದೈ' ಎಂದು ಅತಂತ್ರಕ್ಕೆ ಒಳಗಾಗಿ ಶಿವನ ನೋವನ್ನು ಪರಿಹರಿಸಲು ತನ್ನ ಕಣ್ಣುಗಳನ್ನೇ ಸಮರ್ಪಿಸುತ್ತಾನೆ. ಕಣ್ಣಪ್ಪನಿಗೆ ತನ್ನ ನೋವಿಗಿಂತ ಅವನ ನೋವನ್ನು ಪರಿಹರಿಸುವುದೇ ಮುಖ್ಯವೆಂದು ಭಾವಿಸುತ್ತಾನೆ. ನಿಜವಾದ ಭಕ್ತ , ಭಗವಂತನನ್ನೂ ಪೋಷಿಸಬಲ್ಲ ಎಂಬುದಕ್ಕೆ ಈತನೇ ಉದಾಹರಣೆ.

ಈ ರೀತಿಯ ನಿರೂಪಣೆಯ ಮೂಲಕ ಹರಿಹರ ಸಾಮಾಜಿಕ ಅನಿಷ್ಟವಾದ ಜಾತಿ ವ್ಯವಸ್ಥೆ ಸಾಂಪ್ರದಾಯಿಕ ಆಚರಣೆಗಳನ್ನು ಕಲಾತ್ಮಕ ಚೌಕಟ್ಟಿನಲ್ಲಿಯೇ ಪ್ರತಿಭಟಿಸಿರುವುದನ್ನು ಕಾಣುತ್ತೇವೆ.

ಕುಂಬಾರ ಗುಂಡಯ್ಯನ ರಗಳೆಯಲ್ಲಿ ' ಕಾಯಕವೇ ಕೈಲಾಸ' ಎಂಬ ಮಾತನ್ನು ಕಥನದ ಮೂಲಕ ಚಿತ್ರಿಸಲಾಗಿದೆ. ಗುಂಡಯ್ಯ ವೃತ್ತಿಯಿಂದ ಕುಂಬಾರ, ವೃತ್ತಿಯನ್ನು ಅತಿ ಭಕ್ತಿ, ಶ್ರದ್ಧೆಯಿಂದ ಮಾಡಿ ಅದರಿಂದ ಬಂದ ಹಣವನ್ನು ಶಿವಶರಣರ ಸೇವೆಗೆ ಮೀಸಲಾಗಿಡುತ್ತಿದ್ದ. ಮಡಕೆ ಮಾಡುವ ಪ್ರತಿಯೊಂದು ಹಂತದಲ್ಲಿಯೂ, ಭಕ್ತಿ ತುಂಬಿ ತುಳುಕುತ್ತಿತ್ತು ತನ್ನ ಗಡಿಗೆಯ ನಾದದಿಂದ ಶಿವನನ್ನು ಪರವಶಗೊಳಿಸಿ ತಾಂಡವ ನೃತ್ಯ ಮಾಡಿಸುವ ಸಾಮರ್ಥ್ಯ ಗುಂಡಯ್ಯನ ಕಾಯಕ ನಿಷ್ಠೆಗಿದೆ. ಇಲ್ಲಿ ಭಗವಂತನೇ ಭಕ್ತನ ಬಳಿಗೆ ಬಂದು ಶ್ರಮಜೀವಿಯಾದ ಗುಂಡಯ್ಯನನ್ನು ಗೌರವಿಸುತ್ತಾನೆ.

ನಂಬಿಯಣ್ಣನ ರಗಳೆಯ 'ವೃದ್ಧಮಾಹೇಶ್ವರ ಪ್ರಸಂಗ ನಮ್ಮ ಪ್ರಾಚೀನ ಸಾಹಿತ್ಯದ ಹಾಸ್ಯದ ಕೊರತೆಯನ್ನು ನೀಗಿಸಬಲ್ಲ ಸಾಮರ್ಥ್ಯವನ್ನು ಹೊಂದಿದೆ. ಮಾದಾರ ಚೆನ್ನಯ್ಯನ ರಗಳೆ, ಅಕ್ಕಮಹಾದೆವಿ, ಪ್ರಭುದೇವರ ರಗಳೆಗಳು ಹರಿಹರನ ಶ್ರೇಷ್ಠ ಕಲಾಕೃತಿಗಳಾಗಿವೆ.

ಪುಷ್ಪ ರಗಳೆಯಲ್ಲಿ ಯಾವುದೇ ಮನುಷ್ಯ ಪಾತ್ರಗಳಿಲ್ಲ ಶಿವನಿಗಾಗಿ ಶುದ್ದ ಹೂಗಳನ್ನು ಸಂಗ್ರಹಿಸಿ ಮಾಲೆಗಟ್ಟಿ ವಿರೂಪಾಕ್ಷನಿಗೆ ಅರ್ಪಿಸುವ ಭಕ್ತನ ಇರುವಿಕೆಯಿದೆ.ಮುಂಜಾವಿನ ಬೆಳಗಿನಲ್ಲಿ ಶಿವನಿಗಾಗಿ ಭಕ್ತ ಹೂ ಸಂಗ್ರಹಿಸಲು ತೊಡಗುವ ಕ್ರಿಯೆಯಿಂದ ಆರಂಭಗೊಂಡು ಶಿವನ ಮುಡಿಗರ್ಪಿಸಿ ಭಕ್ತಿಯಲ್ಲಿ ಮುಳುಗುವ ನಿರೂಪಣೆಯೊಂದಿಗೆ ಮುಗಿಯುತ್ತದೆ.ನೆಲದಲ್ಲಿಯೇ ಅರಳಿ ಶಿವನ ಸಿರಿಮುಡಿ ಸೇರುವ ಹೂಗಳಿಗಾಗಿ ಅಲೆಯುವ ಭಕ್ತ ಪರಿಚಯಿಸುವ ಹೂವಿನ ಜಗತ್ತು ಹಾಗೂ ಭಕ್ತನ ಭಾವಾವೇಶವೇ ಇಲ್ಲಿಯ ಕೇಂದ್ರ ವಸ್ತು.ಭಕ್ತ ಹೂಗಳನ್ನು ಸಂಗ್ರಹಿಸುವ ಸಂದರ್ಭದಲ್ಲಿ ನೋಡಿದರೆ ಎಲ್ಲಿ ಮುದುಡುವುದೋ ಎಂದು ಕಣ್ಮುಚ್ಚಿ, ಮನಬಿಚ್ಚಿ ಹೂಗಳನ್ನು ಸಂಗ್ರಹಿಸುವಲ್ಲಿ ತನ್ನಶಿವನಿಗೆ

ಶ್ರೇಷ್ಠವಾದದನ್ನೆ ಸಮರ್ಪಿಸಬೇಕೆಂಬ ಅವನ ಹಂಬಲದಲ್ಲಿ, ತಾಜ ವೈವಿದ್ಯ ಮಯ ಹೂಗಳನ್ನು ಕಂಡು ಹುಚ್ಚೆದ್ದು ಕುಣಿಯುವಲ್ಲಿ ಭಕ್ತಿಯ ತೀವ್ರತೆಯನ್ನು ಕಾಣಬಹುದು.

ಹೀಗೆ ಹರಿಹರ ಕನ್ನಡ ಸಾಹಿತ್ಯಕ್ಕೆ ಹೊಸ ತಿರುವನ್ನು ನೀಡಿ ಮುಂದಿನ ಕವಿಗಳಿಗೆ ಮಾರ್ಗದರ್ಶಕನಾದ, ವಚನಸಾಹಿತ್ಯದ ವೈಚಾರಿಕತೆಯನ್ನು ಕಥನ ಸಾಹಿತ್ಯದ ಮೂಲಕ ಎತ್ತಿಹಿಡಿದ. ಗದ್ಯದ ಬೆಳವಣಿಗೆಯಲ್ಲಿಯೂ ಈತ ನೀಡಿರುವ ಕೊಡುಗೆ ಅಮೂಲ್ಯವಾದುದು. ಇಂದಿಗೂ ಇವನ 'ರಗಳೆ' ಕಾವ್ಯ ಓದುಗರಿಗೆ ವಿಭಿನ್ನ ವ್ಯಕ್ತಿತ್ವ, ವಿಭಿನ್ನ ಲೋಕಗಳನ್ನು ಪರಿಚಯಿಸುವಲ್ಲಿ ಯಶಸ್ವಿಯಾಗಿವೆ. ಸೃಜನಶೀಲ ಕ್ರಿಯೆಯಲ್ಲಿ ಈತ ತೆಗೆದುಕೊಂಡ ಸ್ವತಂತ್ರ ನಿರ್ಧಾರಗಳಿಂದಾಗಿ ಕನ್ನಡ ಸಾಹಿತ್ಯದ ಕ್ರಾಂತಿಕವಿ ಎಂದು ಕರೆಸಿಕೊಂಡಿದ್ದಾನೆ.

ಪರಾಮರ್ಶನ ಕೃತಿಗಳು

೧. ಹರಿಹರನ ವಿಚಾರ ಸಂಕಿರಣ–ಕನ್ನಡ ಸಾಹಿತ್ಯ ಪರಿಷತ್ತು

೨. ಕನ್ನಡ ಸಾಹಿತ್ಯ ಚರಿತ್ರೆ– ರಂ.ಶ್ರೀ. ಮುಗಳಿ

೩. ಶಿವಶರಣರ ರಗಳೆಗಳು– ಬೆಂಗಳೂರು ವಿಶ್ವವಿದ್ಯಾಲಯ